श्री संस्थान नागवे गोमंतक

## श्री लक्ष्मीनारायण महामाया देवस्थान

(कुळाव्यांचे खाजगी देवस्थान)

हनुमट्टा, पोष्ट : वंदिगे, अंकोला – ५८१ ३५७. ( उत्तर कन्नड )
दूरवाणी : ०८३८८–२३०२२२, २९५६४४, मो.: ८१०५८९५६४४
e-mail : slmtmt@yahoo.com

ಶ್ರೀ ಸಂಸ್ಥಾನ ನಾಗವೇ ಗೋಮಂತಕ

## ಶ್ರೀ ಲಕ್ಷ್ಮೀನಾರಾಯಣ ಮಹಾಮಾಯಾ ದೇವಸ್ಥಾನ

(ಕುಳಾವಿಗಳ ಖಾಸಗಿ ದೇವಸ್ಥಾನ)

ಹನುಮಟ್ಟಾ, ಪೋಸ್ಟ್: ವಂದಿಗೆ, ಅಂಕೋಲಾ-581357 (ಉತ್ತರ ಕನ್ನಡ)
ದೂರವಾಣಿ : 08388-230222, 295644, ಮೋ.: 8105895644
Website : www.nagvesamsthanankola.com

Uma-Kiran Art, 97416 20020

श्री शक १९४७ विश्वावसु नाम संवत्सर • २०२५–२०२६

श्री संस्थान नागवे गोमंतक

# श्री लक्ष्मीनारायण महामाया देवस्थान

(कुळाव्यांचे खाजगी देवस्थान)



ಶ್ರೀ ಶಕ 1947 ವಿಶ್ವಾವಸು ನಾಮ ಸಂವತ್ಸರ 2025–2026

ಶ್ರೀ ಸಂಸ್ಥಾನ ನಾಗವೇ ಗೋಮಂತಕ

# ಶ್ರೀ ಲಕ್ಷ್ಮೀನಾರಾಯಣ ಮಹಾಮಾಯಾ ದೇವಸ್ಥಾನ

(ಕುಳಾವಿಗಳ ಖಾಸಗಿ ದೇವಸ್ಥಾನ)

## ।। श्री लक्ष्मीनारायण महामाया प्रसन्न ।।



श्रीलक्ष्मीनारायण



श्री महामाया

सर्व मंगल मांगल्ये शिवे सर्वार्थ साधिके ।
शरण्ये त्र्यंबके गौरी नारायणि नमोऽस्तुते ।।

शरणागत दीनार्त परित्राण परायणे ।
सर्वस्यार्ति हरे देवि नारायणि नमोऽस्तुते ।।

शंख चक्र गदा शाङ्‌र्ग गृहीत परमायुधे ।
प्रसीद वैष्णवी रुपे नारायणि नमोऽस्तुते ।।

लक्ष्मि लज्जे महाविद्ये श्रद्धे पुष्टिस्वधे ध्रुवे ।
महारात्रि महामाये नारायणि नमोऽस्तुते ।।

## धर्मदर्शी मंडळी


| | |
|---|---|
| श्री. श्रीनिवासराव वासुदेवराव देंपो | अध्यक्ष |
| श्री. पांगाळ सुरेश नायक | उपाध्यक्ष |
| श्री. रवळनाथ मुकुंद शेणवी घोडे | आ. मोक्तेसर |
| श्री. नागप्पा (मोहनदास) गोविंद महाले | मोक्तेसर |
| श्री. लक्ष्मीनारायण राघवेंद्र पै | मोक्तेसर |
| श्री. राघव विष्णु बाळेरी | मोक्तेसर |
| श्री. चैतन्य दिनकर मुर्डेश्वर | मोक्तेसर |

| गांवकार : | अर्चक : |
|---|---|
| श्री. विजय वामन पै | वेदमूर्ति वामन वासुदेव भट्ट |
| | वेदमूर्ति वेंकटेश देविदास भट्ट |


## ಧರ್ಮದರ್ಶಿ ಮಂಡಳಿ


| | |
|---|---|
| ಶ್ರೀ. ಶ್ರೀನಿವಾಸರಾವ ವಾಸುದೇವರಾವ ದೆಂಪೋ | ಅಧ್ಯಕ್ಷ |
| ಶ್ರೀ. ಪಾಂಗಾಳ ಸುರೇಶ ನಾಯಕ | ಉಪಾಧ್ಯಕ್ಷ |
| ಶ್ರೀ. ರವಳನಾಥ ಮುಕುಂದ ಶೇಣ್ವಿ ಘೋಡೇ | ಆ. ಮೊಕ್ತೇಸರ |
| ಶ್ರೀ. ನಾಗಪ್ಪಾ (ಮೋಹನದಾಸ) ಗೋವಿಂದ ಮಹಾಲೇ | ಮೋಕ್ತೇಸರ |
| ಶ್ರೀ. ಲಕ್ಷ್ಮೀನಾರಾಯಣ ರಾಘವೇಂದ್ರ ಪೈ | ಮೊಕ್ತೇಸರ |
| ಶ್ರೀ. ರಾಘವ ವಿಷ್ಣು ಬಾಳೇರಿ | ಮೋಕ್ತೇಸರ |
| ಶ್ರೀ. ಚೈತನ್ಯ ದಿನಕರ ಮುರ್ಡೇಶ್ವರ | ಮೊಕ್ತೇಸರ |

| ಗಾಂವಕಾರ : | ಅರ್ಚಕರು : |
|---|---|
| ಶ್ರೀ. ವಿಜಯ ವಾಮನ ಪೈ | ವೇದಮೂರ್ತಿ ವಾಮನ ವಾಸುದೇವ ಭಟ್ಟ |
| | ವೇದಮೂರ್ತಿ ವೆಂಕಟೇಶ ದೇವಿದಾಸ ಭಟ್ಟ |


## DHARMADARSHI MANDALI


| | |
|---|---|
| Shri. Srinivasrao Vasudevrao Dempo | President |
| Shri. Pangal Suresh Nayak | Vice-President |
| Shri. Ravalnath Mukund Shenvi Ghode | Ad. Moktesar |
| Shri. Nagappa (Mohandas) Govind Mahale | Moktesar |
| Shri. Laxminarayan Raghavendra Pai | Moktesar |
| Shri. Raghav Vishnu Baleri | Moktesar |
| Shri. Chaitanya Dinakar Murdeshwar | Moktesar |

| Gaonkar : | Archak : |
|---|---|
| Shri. Vijay Vaman Pai | Vedmoorti Vaman Vasudev Bhat |
| | Vedmoorti Venkatesh Devidas Bhat |

श्री संस्थान नागवे गोमंतक

# श्री लक्ष्मीनारायण महामाया देवस्थान

(कुळाव्यांचे खाजगी देवस्थान)

हनुमट्टा, पोष्ट : वंदिगे, अंकोला - ५८१ ३५७, (उत्तर कन्नड)

प्रिय कुळावी बांधवांस,

नूतन वर्षाच्या शुभेच्छा, सोबत येणारे ''विश्वावसु'' नाम संवत्सर आमचे सर्व कुळावी बांधवांस अत्यंत आनंद व उत्साहाचे जावो आणि आपल्या सर्वांच्या पुढील वाटचालीत यश प्राप्त होवो अशी श्री कुलदेवते चरणी प्रार्थना करुन, आपणा सर्वांना शुभ इच्छितो.

श्री कुलदेवीच्या अनुग्रहाप्रमाणे ''क्रोधी'' नाम संवत्सर देखील आम्हा सर्वास अत्यंत आनंद-उत्साहात पार पडले म्हणून कळविणेस आनंद होत आहे. आमच्या नागवे संस्थानात आधीपासून चालत आलेले सर्व धार्मिक कार्यक्रम, उत्सवादी श्रद्धा भक्तीने साजरे झाले. वडे पंचमी देवकार्य देखील नियोजित वेळेत अत्यंत थाटामाटात साजरा होऊन, आलेल्या कुळावींना वेळेनुसार संतर्पणाचा प्रसाद प्राप्त होऊन आपापल्या गावी परतण्यास सोईचे झाले. श्री कुलमातेच्या अनुग्रहाने देवस्थानात अशा प्रकारचे देवकार्य-उत्सव निर्विघ्नपणे साजरे होतात असे मी आत्मसंतोषाने सांगू इच्छितो. यापुढे देखील आमच्या नागवे संस्थानात साजरे होणारे सर्व उत्सव यथासांग सुरळीत पार पाडोत म्हणून आपण सर्व कुळाव्या तर्फे प्रार्थना करितो.

दरवर्षी चैत्र मासांत होणारे श्री शतचंडी, लघुविष्णू हवन व पूर्णाहुती कार्य देखील आलेल्या वैदिक वृंदाकडून ठरलेल्या

वेळेत श्रद्धा-भक्तीने साजरा होऊन, त्यानिमित्त समस्त कुळावी व भजकांना आयुरारोग्य, सुख-शांती-समृद्धी प्राप्त होऊन, सकल मनोकामना पूर्ण होण्या बाबत श्री लक्ष्मीनारायण महामाया व समस्त परिवार देवता चरणी प्रार्थना करून मिळविलेला विभूती प्रसाद सोबत पाठविला आहे. त्याचा स्वीकार करून कृतार्थ व्हावे.

हे सर्व उत्सव यशस्वी रित्या पार पाडण्यांत सहकार्य केलेल्या आमचे धर्मदर्शी मंडळाचे सदस्य, वैदिक वृंद, अर्चक वर्ग, कर्मचारी, स्वयंपाकी जन, परिचारक वर्ग या सर्वांना मनःपूर्वक कृतज्ञता व्यक्त करितो.

वनभोजन कार्तिकोत्सव सुरळीत पार पाडण्यास सहकार्य केलेल्या स्थळवंतीक वृंद व कुळाव्यांचे पुन्हा एकदा आभार मानतो. यापुढील काळात देखील याचप्रमाणे आपल्या सर्वांचे सहाय-सहकार्य लाभुन वाटचाल होत रहावी म्हणून सर्व कुळावी बांधवांस विनंती.

गतवर्षी अयोध्येमध्ये श्री रामलल्ला प्रतिष्ठापना सोहळ्याच्या स्मृती प्रित्यर्थ दि. ११-०१-२०२५ रोजी देवस्थानात रामनाम जप, भजन, विविध सेवा, अनेक प्रकाराचे नैवेद्य सेवा, आलेल्या कुळावी भक्ताकरवी खूप थाटामाटात पार पाडला. रात्री दीपोत्सव, महामंगळारती सोबत उपस्थित सर्व भक्तांना उपहाराची व्यवस्था पण केली होती हे कळविण्यास आनंद होत आहे.

देवस्थानाच्या वैभवात वाढ होण्याच्या दृष्टीने बऱ्याच वर्षापासून खूपशा योजना कार्यान्वित झालेले सर्वांस ज्ञात आहेच. तरी पण पुढील काळात बऱ्याच विकास योजना हाती घेणार हे सांगू

इच्छितो. त्यात प्रामुख्याने सौर-ऊर्जा द्वारे वीजेचा वापर, ईश्वर देवस्थाना समोरील ''कल्याणी'' तलावाचे दुरुस्ती कार्य, जुने वसतीगृह खोल्यांचे नूतनीकरण होणेचे आहे. खोलींच्या दानी जन आपल्या खोलीला ''वातानुकूलीत'' यंत्र बसवू इच्छिणाऱ्यांनी कार्यालयाशी संपर्क साधावा. याशिवाय पुरातन सेजामाळी (प्रवेशद्वार) चे नूतनीकरण, छतावर तांब्याचा पत्रा बसविण्याचे कार्य नियोजित केले आहे. वनभोजन-कार्तिकोत्सवाच्या रथाचे नवीकरण व त्यावर चांदीच्या पत्र्याने सुशोभिकरण कार्य लगेच करणेचे निश्चित केले आहे. या कार्यास देणगी देऊ इच्छिणाऱ्या कुळाव्यांनी कार्यालयाशी त्वरित संपर्क करु शकता.

देवस्थानात होणारे कार्य-सेवा समर्पक रित्या झाले पाहिजेत. याबाबत आपल्या सर्वांचे सहाय्य-सहकार्याची अपेक्षा करितो. अपल्या सल्ला-सूचना, उणिवा-कमतरता असल्यास वडे पंचमीच्या महाअन्नसंतर्पणा नंतर (दुपारी ४-३० वा.) होणाऱ्या ''कुळाव्यांच्या सामान्य सभे''त मांडू शकता. शिवाय इतर दिवशी देवस्थान कार्यालयात लेखी लिहून आमच्या नजरेस आणू शकता, आपल्या सल्ला-सूचनांचे सदैव स्वागत आहे.

देवस्थानच्या ''श्री महामाया विद्यानिधी फंडा''स कुळाव्यांकडून भरपूर प्रोत्साहन मिळत असून, आतापर्यंत रु. ७३ लाखाहून अधिक निधी जमला असून, बऱ्याच गरीब विद्यार्थ्यांना सोईचे होत आहे. या आधी सहाय्य धन मिळविलेले विद्यार्थी आपला विद्याभ्यास संपवून वृत्तिनिरत झालेल्याकडूनही विद्यानिधी फंडास देणगी मिळत असून, ही फार आनंदाची बाब आहे. या विद्यानिधीत देवस्थानच्या वतीने पण वाढीव रक्कम भरीस घालून राहिलेल्या

विद्यार्थ्यांना पण धनसहाय्य करीत आहोत. याबद्दल यापुढेही आपल्या सर्वांच्या प्रोत्साहनाची अपेक्षा करितो.

पुढील पृष्ठावर ''कुळाव्यांच्या माहितीसाठी'' सामान्य माहिती दिले आहेत. त्याकडे अवश्य लक्ष द्यावे.

शेवटी सर्व कुळाव्यांना विनंती आहे की, आपल्या नागवे संस्थाना संबंधीत, देवस्थान परिसराची स्वच्छता, वसतीगृह, कॅन्टीन व खाद्यपदार्थ-जेवणा विषयी, पूजा-विधी-सेवे बाबत, कार्यालय कर्मचारी बद्दल किंवा संस्थानांत कोणत्याही प्रकारची गैरसोय किंवा इतर काही सल्ला-सूचना असल्यास, माझ्या स्वतःच्या पत्त्यावर लिहून देवस्थान कार्यालयात कळविल्यास, त्यात तथ्य आढळल्यास शक्यतो दखल घेतली जाईल असे सांगू इच्छितो.

कुळाव्यांनी दुसरी लक्ष देण्यासारखी बाब म्हणजे, देवस्थानाचे कोणतेच अधिकृत ''फेसबुक'' किंवा ''वॉटस्‌ॲप'' नाहीत. यापासून माहिती मिळवून फसगत झाल्यास देवस्थान जबाबदार नाही. देवस्थानाचे प्रमुख वार्षिक उत्सवादी कार्यक्रमांची माहिती दरवर्षी प्रकाशित होणाऱ्या रायस पत्रांत असतेच व आमच्या वेबसाईटवर (www.nagvesamsthanankola.com) पण पाहू शकता. तसेच कोणतीही माहिती हवी असल्यास देवस्थान कार्यालयास फोन/ईमेल/पत्रा द्वारे संपर्क साधू शकता.

श्री लक्ष्मीनारायण महामाया सर्वांस सन्मंगल करो अशी प्रार्थना.

श्रीनिवासराव वासुदेवराव देंपो
अध्यक्ष,
श्री लक्ष्मीनारायण महामाया देवस्थान,
हनुमट्टा, अंकोला

वैशाख पौर्णिमा

१२-५-२०२५

# ❋ कुळाव्यांच्या माहितीसाठी ❋

- **वस्त्र संहिता :-** देवस्थानात प्रवेश करणाऱ्या प्रत्येक कुळावी भक्तांनी या खालील प्रमाणे वस्त्र संहिता पाळावी.

◆ **१५ वर्षावरील पुरुषांनी परिधान करावयाचे वस्त्र :**

सफेद लुंगी, फुल पॅन्ट, शर्ट, जुब्बा - पायजमा, कुर्ता, अंगवस्त्र नेसून उघड्याने येणाऱ्याने उपरणे (शाल) वापरावे.

**निर्बंधित वस्त्र संहिता :-**
रंगी-बेरंगी लुंगी, चड्डी, जीन्स हाफ पॅन्ट, उघड्या गळ्याचे टी-शर्टस्

◆ **१५ वर्षावरील महिलांनी नेसावयाचे वस्त्र :**

घाघरा-चोळी, सलवार-कमीज-ओढणी, साडी

**निर्बंधित वस्त्र संहिता :-**
मिनी-मिडी स्कर्ट, हाफ पॅन्ट, जीन्स पॅन्ट, कुर्ती, टी-शर्टस्.

- आमचे काही कुळावी देवस्थानाच्या वेब-साईटवर सेवेचा तपशील इत्यादी पाठवितात. पण त्या कार्यालयातील संबंधितांना पोचत नाहीत. त्या करिता कुळाव्यांनी सेवा किंवा इतर कोणत्याही माहितीसाठी आमच्या ई-मेल (slmtmt@yahoo.com) वर संपर्क करावा किंवा देवस्थान कार्यालयाच्या कर्मचाऱ्यांशी चौकशी करून माहिती करून घेणे.

- विशेष उत्सवाच्या संदर्भाखेरीज इतर दिवशी रोज दुपारी १२-०० वाजता व रात्री ८-०० वाजता महापूजेस सुरुवात होते.

● नाष्टा-जेवणासाठी कँटीन कूपन्स देवस्थान-कार्यालयात दुपारी १२-३० व रात्री ७-३० च्या आत आधीच घ्यावीत. त्या नंतर कूपन्स मिळणार नाहीत. उशीरा येणाऱ्यांकरिता कूपन्स राखून ठेवण्याची पद्धत नाही. कुळाव्यांच्या आग्रहाप्रमाणे खाद्य पदार्थ कँटीनमध्ये करता येणार नाहीत. देवस्थानाचे कॅन्टीन परगांवाहून येणाऱ्या कुळाव्यांच्या सोईसाठी असल्याने सर्व कुळाव्यांनी कॅन्टीनच्या शिस्तीचे पालन करावे ही विनंती.

● ''अन्नदान सेवे''त भाग घेऊ इच्छिणाऱ्या कुळावी दानी जनांनी, याखाली नमूद केल्या प्रमाणे आपली सेवा कार्यालयाशी संपर्क साधून आगावू नोंदविणे. प्रथम येणाऱ्यास प्रथम संधी दिली जाईल.

| | |
|---|---|
| अ) एका दिवसासाठी संपूर्ण अन्नदान प्रसाद सेवा (चहा नाष्टा + दुपारचे जेवण + रात्री जेवण) | रु. ८,००० |
| आ) दुपारी अन्नदान प्रसाद सेवा | रु. २,५०० |
| इ) रात्री अन्नदान प्रसाद सेवा | रु. २,५०० |
| ई) चहा + नाष्टा सेवा | रु. २,५०० |

देवस्थाना संबंधित विशेष उत्सव / संतर्पण / कार्यक्रमांखेरीज इतर दिवशी मात्र वरील सेवा केल्या जातील.

**● स्वत: येऊन सेवा करणे अशक्य असणाऱ्यांनी श्री सानिध्यात काणुक, वंतिगा व सेवेची रक्कम, डीडी, चेक, मेल ट्रान्सफर द्वारा पाठवू शकतात. रक्कम पाठवितांना आपला संपूर्ण पत्ता, सेवेचा तपशील व उद्देश व्यवस्थित लिहून कळवावे ही विनंती. बँक द्वारा मेल ट्रान्सफर केलेल्यांनी कार्यालयाशी संपर्क साधून कळविण्याने आपली सेवा-उद्देश समजण्यास सोईचे होईल.**

● कुळावी बांधवांनी आपली देणगी, काणुक व सेवेची रक्कम मेल

ट्रान्सफर करतेवेळी याखालील ट्रस्ट व संबंधित बँक खाते नंबर लक्षात घ्यावेत.

खातेचे नांव : श्री लक्ष्मीनारायण महामाया टेम्पल

अ) यूनियन बँक ऑफ इंडिया, अंकोला :

खाते क्र. 520101228152867

IFSC CODE : UBIN0900672

आ) केनरा बँक, अंकोला :

खाते क्र. 0304220000358

IFSC CODE : CNRB0010304

● विविध सेवा ट्रस्टांना रक्कम पाठविणाऱ्यांनी देवसच्थानाच्या कार्यालयाशी संपर्क साधून सदर ट्रस्टचे खाते नं. जाणून आपली देणगी पाठवावी.

● **वस्तु रूपी देणगी देणाऱ्या कुळाव्यांनी देवस्थानाच्या कार्यालयात देऊन त्याची रीतसर पावती घ्यावी.**

● **देवस्थानांत साजरे होणाऱ्या विशेष उत्सवा दिवशी कुळावी आपले कौटुंबिक कार्यक्रम (लग्न/मुंज ई. मंगलकार्य) करू शकत नाहीत. कार्यालयाशी चौकशी करून माहिती घेणे.**

● **देवस्थानाच्या रीतीनुसार दर एकादशी दिवशी व काहीं विशेष दिनी देवाजवळ कोणतीही सेवा रुजू करता येत नाही. काही महत्वाच्या उत्सवा दिनी उत्सवा निमित्त काही सेवा करता येणार नाहीत. पुष्प पूजा रात्री महापूजेवेळीच रुजू केली जाते. या विषयी आधीच कार्यालयात चौकशी करून माहिती घेणे.**

● **सर्व कुळावीं बांधवांना प्रसाद पाठविण्याच्या सदिच्छेने पत्ते जमविले आहेत. पत्ता बदलल्यास किंवा रायस पत्र पोहोचत**

नसल्यास कुळावींनी कार्यालयाशी संपर्कून पत्त्यात सुधार करून घेण्याची विनंती.

● कृपया कुळाव्यांनी आपली काणुक, देणगी रु. २,५०० हून अधिक असल्यास चेक/डीडी द्वारेच द्यावी. तसेच रु.१०,००० किंवा अधिक देणाऱ्या कुळाव्यांनी आपल्या पॅन कार्डची प्रत द्यावी.

● विदेशी चलनातील देणगी स्वीकारली जाणार नाही.

● सालाबादाप्रमाणे वडेपंचमी महाअन्नसंतर्पणे नंतर कुळाव्यांची "सामान्य सभा" कार्यालयात भरते. यात सर्व कुळाव्यांनी भाग घ्यावा.

## वसतीगृहाच्या दानी जनां करिता

१) देवस्थानातील प्रमुख उत्सव जसे विजया दशमी, वडे पंचमी, शतचंडी हवन व इतर उत्सव संदर्भात आपापल्या खोल्या आपणा साठीच राखून ठेवले जातील. त्यासाठी वास्तव्यास येणाऱ्या दानीनी ५ दिवसा आधी अगावू देवस्थान कार्यालयास कळविणे. चुकल्यास आपली खोली उत्सवास आलेल्या इतर कुळावींना वास्तव्यास देण्यात येईल. लक्षात असु द्या.

२) उत्सवाच्या व्यतिरिक्त इतर दिवशी खोलीचे दानी वास्तव्यास येणार असल्यास ३ दिवस आधी आगाऊ कार्यालयास कळविणे आवश्यक आहे. चुकल्यास सदर खोली देवस्थानास आलेल्या कुळावींना देण्यात येईल.

● कुळावींना ३ दिवसा पेक्षा जास्त दिवस खोलीत वास्तव्य करता येणार नाही. जास्त दिवस रहावयाचे झाल्यास अगावू कळवून धर्मदर्शी मंडळाची परवानगी घ्यावी लागेल.

● दूरध्वनी किंवा पत्रव्यवहारा द्वारे वास्तव्यासाठी खोली अगावू राखून ठेवण्याची पद्धत नाही. 'आधी आलेल्यास आधी' या तत्वानुसारच खोल्या वितरीत केल्या जातील.

● कुळाव्यांनी रूम घेतेवेळी आपल्या ओळखपत्राची नकल देऊन रजिस्टर मध्ये नोंद करणे आवश्यक आहे.

● यापुढे मनी-ऑर्डर द्वारा आलेली रक्कम फक्त काणुक म्हणून स्वीकारण्यात येईल, कारण नवीन इ-मनी ऑर्डर फॉर्मवर सेवा माहिती लिहिण्याची सोय नाही.

● ''विद्यानिधी'' शिष्यवृत्ती साठी अर्ज पोचण्याची अंतिम तारीख ३१ ऑगस्ट २०२५.

● दि. ३-५-२०२२ मंगळवार, वैशाख शुद्ध तृतीया (अक्षय तृतीया) रोजी श्री पुरुषांनी दर्शन आल्या वेळी सांगितल्या प्रमाणे वडेपंचमी रोजी देवस्थानचे गांवकार सोबत, देंपो घराण्याचे एक व्यक्ती व महाले घराण्याचे एक व्यक्ती यांच्या शिवाय कोणीही श्री भगवती देवळात प्रवेश करू नये. शिवाय हाताने वडे काढण्या संदर्भात श्री देवस्थानाचे गांवकार व्यतिरिक्त इतर कुळाव्यांनी वडे कढईत हात घालणे, कढईतील तेलास हात लावणे करू नये. चुकल्यास श्री भगवती देवीच्या अवकृपेस पात्र व्हाल म्हणून सुचविले आहे हे लक्षात घ्या.

● देवस्थानाच्या सेवा, उत्सव, वास्तव्य, किंवा इतर कोणतीही माहिती हवी असल्यास देवस्थान कार्यालयाशी दूरध्वनी अथवा **E-mail** द्वारा चौकशी करून खात्री करून घेणे. इतरांकडून चुकीची माहिती मिळाली असल्यास त्यास देवस्थान जबाबदार नाही.

कार्यालयाचा दूरध्वनी क्र. : (08388) 230222, 295644
Cell : 8105895644, E-mail : slmtmt@yahoo.com
Website : www.nagvesamsthanankola.com

ಶ್ರೀ ಸಂಸ್ಥಾನ ನಾಗವೇ ಗೋಮಂತಕ

# ಶ್ರೀ ಲಕ್ಷ್ಮೀನಾರಾಯಣ ಮಹಾಮಾಯಾ ದೇವಸ್ಥಾನ

(ಕುಳಾವಿಗಳ ಖಾಸಗಿ ದೇವಸ್ಥಾನ)

ಹನುಮಟ್ಟಾ, ಪೋಸ್ಟ್ಃ ವಂದಿಗೆ, ಅಂಕೋಲಾ - 581 357 (ಉತ್ತರ ಕನ್ನಡ)

ಪ್ರಿಯ ಕುಳಾವಿ ಬಾಂಧವರಿಗೆ,

ಹೊಸ ವರ್ಷದ ಶುಭಾಶಯಗಳೊಂದಿಗೆ ಈ ''ವಿಶ್ವಾವಸು'' ನಾಮ ಸಂವತ್ಸರದಲ್ಲಿ, ನಮ್ಮೆಲ್ಲ ಕುಳಾವಿ ಬಾಂಧವರು ಅತೀ ಉಲ್ಲಾಸ-ಉತ್ಸಾಹದಿಂದ ಮುಂದುವರೆಯುವಂತಾಗಲಿ ಮತ್ತು ತಮ್ಮೆಲ್ಲರ ಕಾರ್ಯಕಲಾಪಗಳಲ್ಲಿ ಯಶಸ್ಸು ಪ್ರಾಪ್ತವಾಗಲೆಂದು ಶ್ರೀ ಕುಲದೇವರಲ್ಲಿ ಪ್ರಾರ್ಥಿಸಿ ತಮ್ಮೆಲ್ಲರಿಗೂ ಶುಭವನ್ನು ಕೋರುತ್ತೇನೆ.

ಶ್ರೀ ಕುಲದೇವತೆಯ ಅನುಗ್ರಹದಂತೆ ''ಕ್ರೋಧಿ'' ನಾಮ ಸಂವತ್ಸರವು ಕೂಡ ನಮ್ಮೆಲ್ಲರ ಪಾಲಿಗೆ ಅತಿ ಉತ್ಸಾಹದಿಂದ ಗತಿಸಿತೆಂದು ತಿಳಿಸಲು ತುಂಬ ಸಂತೋಷ ಪಡುತ್ತೇನೆ. ನಮ್ಮ ನಾಗವೇ ಸಂಸ್ಥಾನದಲ್ಲಿ ಈ ಹಿಂದೆ ನಡೆದು ಬಂದಂತಹ ಎಲ್ಲ ಧಾರ್ಮಿಕ ಕಾರ್ಯಕಲಾಪಗಳು, ಉತ್ಸವಗಳು, ಶ್ರದ್ಧಾಭಕ್ತಿಯಿಂದ ಆಚರಿಸಲ್ಪಟ್ಟವು. ವಡೆ ಪಂಚಮಿ ದೇವಕಾರ್ಯವೂ ಸಹ ಅತ್ಯಂತ ವಿಜೃಂಭಣೆಯಿಂದ ನಡೆಯಿತಲ್ಲದೇ, ಬಂದಂತಹ ಕುಳಾವಿಗಳಿಗೆ ಸರಿಯಾದ ವೇಳೆಯಲ್ಲಿ ಅನ್ನಸಂತರ್ಪಣೆಯ ಪ್ರಸಾದವನ್ನು ಪಡೆದು ತಮ್ಮ ತಮ್ಮ ಊರಿಗೆ ತೆರಳುವಲ್ಲಿ ಸಫಲವಾಯಿತು. ನಮ್ಮ ಕುಲಮಾತೆಯ ಅನುಗ್ರಹದಿಂದ ನಮ್ಮ ದೇವಸ್ಥಾನದಲ್ಲಿ ಇಂತಹ ದೇವಕಾರ್ಯಗಳು, ಉತ್ಸವಗಳು ಯಾವುದೇ ಅಡೆ-ತಡೆಗಳಿಲ್ಲದೇ ನಡೆಯುತ್ತವೆಂದು ನಾನು ಆತ್ಮ ಸಂತೋಷದಿಂದ ಹೇಳ ಬಯಸುತ್ತೇನೆ. ಮುಂಬರುವ ದಿನಗಳಲ್ಲಿ ಕೂಡ ನಮ್ಮ ನಾಗವೇ ಸಂಸ್ಥಾನದಲ್ಲಿ ಜರುಗುವ ಎಲ್ಲ ಉತ್ಸವಗಳು ಸುಸೂತ್ರವಾಗಿ ನಡೆಯುವಂತಾಗಲೆಂದು ನಿಮ್ಮೆಲ್ಲ ಕುಳಾವಿಯರ ಪರವಾಗಿ ಬೇಡಿಕೊಳ್ಳುತ್ತೇನೆ.

ಪ್ರತಿ ವರ್ಷ ಚೈತ್ರ ಮಾಸದಲ್ಲಿ ನಡೆಯುವ ಶ್ರೀ ಶತಚಂಡಿ, ಲಘುವಿಷ್ಣು ಹವನ ಮತ್ತು ಪೂರ್ಣಾಹುತಿಯನ್ನು ಕೂಡ ಬಂದಂತಹ ವೈದಿಕರು ಸಮಯಕ್ಕೆ ಸರಿಯಾಗಿ ಶೃದ್ಧಾ-ಭಕ್ತಿಯಿಂದ ಸಲ್ಲಿಸಿ, ತನ್ನಿಮಿತ್ತ ಸಮಸ್ತ ಕುಳಾವಿ ಬಾಂಧವರಿಗೆ ಮತ್ತು ಭಜಕರಿಗೆ

ಆಯುರಾರೋಗ್ಯ, ಸುಖ, ಶಾಂತಿ, ಸಮೃದ್ಧಿ ದಯಪಾಲಿಸಿ ಸಕಲ ಮನೋಭಿವೃದ್ಧಿ ಅನುಗ್ರಹಿಸುವಂತೆ ಶ್ರೀ ಲಕ್ಷ್ಮೀನಾರಾಯಣ ಮಹಾಮಾಯಾ ಮತ್ತು ಸಮಸ್ತ ಪರಿವಾರ ದೇವರ ಚರಣಗಳಲ್ಲಿ ಪ್ರಾರ್ಥಿಸಿ ಪಡೆದ ಮುಡಿಗಂಧ ಪ್ರಸಾದವನ್ನು ಲಗ್ತ ಕಳುಹಿಸಿದೆ. ಸ್ವೀಕರಿಸಿ ಕೃತಾರ್ಥರಾಗುವದು.

ಈ ಎಲ್ಲಾ ಕಾರ್ಯಗಳನ್ನು ಯಶಸ್ವಿಗೊಳಿಸುವಲ್ಲಿ ಸಹಕರಿಸಿದ ನಮ್ಮ ಧರ್ಮದರ್ಶಿ ಮಂಡಳಿಯ ಸದಸ್ಯರಿಗೂ, ವೈದಿಕ ವೃಂದದವರಿಗೂ, ಅರ್ಚಕರಿಗೂ, ಸಿಬ್ಬಂದಿ ವರ್ಗ, ಊಟೋಪಚಾರದ ಅಡಿಗೆಯವರಿಗೂ, ಪರಿಚಾರಕ ವರ್ಗದವರಿಗೂ ನನ್ನ ತುಂಬು ಹೃದಯದ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

ವನಭೋಜನದ ಕಾರ್ತಿಕೋತ್ಸವವು ಸಾಂಗವಾಗಿ ನೆರವೇರಿಸಿಕೊಂಡು ಹೋಗುವಲ್ಲಿ ಸಹಕರಿಸಿದ ಸ್ಥಳೀಯ ಕುಳಾವಿಗಳಿಗೂ ಇನ್ನೊಮ್ಮೆ ನನ್ನ ಅಭಿನಂದನೆಗಳನ್ನು ಸಲ್ಲಿಸ ಬಯಸುತ್ತೇನೆ. ಮುಂಬರುವ ಸಮಯದಲ್ಲೂ ಕೂಡ ತಮ್ಮೆಲ್ಲರ ಸಹಾಯ-ಸಹಕಾರ ಇದೇ ರೀತಿ ಮುಂದುವರೆಯಯುವಂತಾಗಲೆಂದು ಎಲ್ಲ ಕುಳಾವಿ ಬಾಂಧವರಲ್ಲಿ ವಿನಂತಿಸಿಕೊಳ್ಳುತ್ತೇನೆ.

ಕಳೆದ ಸಂವತ್ಸರದಲ್ಲಿ ಅಯೋಧ್ಯೆಯಲ್ಲಿ ಜರುಗಿದ ಶ್ರೀರಾಮಲಲ್ಲಾ ಪ್ರತಿಷ್ಠಾಪನೆಯ ಸವಿನೆನಪಿಗಾಗಿ ದಿ. 11-01-2025 ರಂದು ದೇವಸ್ಥಾನದಲ್ಲಿ ರಾಮ ನಾಮ ಜಪ, ಭಜನೆ ವಿವಿಧ ಸೇವೆಗಳು, ವಿಧ-ವಿಧ ನೈವೇದ್ಯಗಳ ಸೇವೆ, ನೆರೆದ ಕುಳಾವಿ-ಭಕ್ತಾದಿಗಳಿಂದ ಅತೀ ವಿಜೃಂಭಣೆಯಿಂದ ನಡೆಯಿತು. ರಾತ್ರಿ ದೀಪೋತ್ಸವ, ಮಹಾಮಂಗಳಾರತಿಗಳೊಂದಿಗೆ ಬಂದ ಎಲ್ಲಾ ಭಕ್ತಾದಿಗಳಿಗೆ ಉಪಹಾರ ವ್ಯವಸ್ಥೆಯನ್ನು ಏರ್ಪಡಿಸಲಾಗಿತ್ತೆಂದು ತಿಳಿಸಲು ಸಂತೋಷವಾಗುತ್ತದೆ.

ದೇವಸ್ಥಾನದ ವೈಭವವನ್ನು ಹೆಚ್ಚಿಸುವಂತೆ ಹಲವಾರು ವರ್ಷಗಳಿಂದ ಬಹಳಷ್ಟು ಯೋಜನೆಗಳು ಕಾರ್ಯರೂಪಗೊಂಡಿದ್ದು ತಮಗೆಲ್ಲ ತಿಳಿದ ವಿಷಯ. ಅಂತೆಯೇ ಮುಂಬರುವ ವರ್ಷಗಳಲ್ಲಿ ಹಲವಾರು ಅಭಿವೃದ್ಧಿ ಯೋಜನೆಗಳನ್ನು ಕೈಗೊಳ್ಳಲಾಗುವದೆಂದು ತಿಳಿಸಬಯಸುತ್ತೇನೆ. ಅವುಗಳಲ್ಲಿ ಪ್ರಮುಖವಾಗಿ ಸೌರಶಕ್ತಿಯ ಮೂಲಕ ವಿದ್ಯುತ್ ಬಳಕೆ, ದೇವಸ್ಥಾನದ ''ಕಲ್ಯಾಣಿ'' ಕೆರೆಯ ದುರಸ್ತಿ ಕಾರ್ಯ,

ಹಳೆಯ ವಸತಿಗೃಹ ಕೊಠಡಿಗಳ ನವೀಕರಣ ಆಗುವದಿದೆ. ಕೊಠಡಿಗಳ ದಾನಿಗಳು ತಮ್ಮ ತಮ್ಮ ಕೊಠಡಿಗಳಿಗೆ ''ಹವಾನಿಯಂತ್ರಣ ಯಂತ್ರ'' ಅಳವಡಿಸಲಿಚ್ಛಿಸುವವರು ಕಾರ್ಯಾಲಯಕ್ಕೆ ಸಂಪರ್ಕಿಸಬಹುದು. ಇವಲ್ಲದೆ ಪುರಾತನ ಸೆಜ್ಜಾ ಮಾಳಿಗೆ (ಪ್ರವೇಶದ್ವಾರ) ನೂತನೀಕರಣ ಮತ್ತು ಅದರ ಮೇಲ್ಛಾವಣಿಗೆ ತಾಮ್ರದ ಹೊದಿಕೆ ಅಳವಡಿಸುವ ಕಾರ್ಯ ನಿಯೋಜಿಸಲಾಗಿದೆ. ವನಭೋಜನ ಕಾರ್ತಿಕೋತ್ಸವದ ರಥದ ನವೀಕರಣ ಮತ್ತು ಅದಕ್ಕೆ ಬೆಳ್ಳಿಯ ಹೊದಿಕೆಯ ಕಾರ್ಯ ಈ ಕೂಡಲೇ ಮಾಡುವದಾಗಿ ನಿಶ್ಚಯಿಸಲಾಗಿದೆ. ಕುಳಾವಿಗಳು ಈ ಸೇವಾ ಕಾರ್ಯಕ್ಕೆ ತಮ್ಮ ದೇಣಿಗೆ ನೀಡಲಿಚ್ಛಿಸುವವರು ಕಾರ್ಯಾಲಯಕ್ಕೆ ಕೂಡಲೇ ಸಂಪರ್ಕಿಸಬಹುದು.

ದೇವಸ್ಥಾನದಲ್ಲಿ ನಡೆಯುವ ಪ್ರತಿಯೊಂದು ಕಾರ್ಯಗಳು, ಸೇವೆಗಳು ಸಮರ್ಪಕವಾಗಿ ನಡೆಯಬೇಕಾಗಿದೆ, ಈ ಬಗ್ಗೆ ತಮ್ಮೆಲ್ಲರ ಸಹಾಯ ಸಹಕಾರವನ್ನು ಅಪೇಕ್ಷಿಸುತ್ತೇನೆ. ತಮ್ಮ ಸಲಹೆ-ಸೂಚನೆ, ಕುಂದುಕೊರತೆಗಳೇನಾದರೂ ಇದ್ದಲ್ಲಿ ವಡೆ ಪಂಚಮಿಯ ಮಹಾಸಂತರ್ಪಣೆಯ ನಂತರ (ಸುಮಾರು 4-30 ಘಂಟೆಗೆ) ನಡೆಯುವ ''ಕುಳಾವಿಗಳ ಸಾಮಾನ್ಯ ಸಭೆ''ಯಲ್ಲಿ ತಿಳಿಸಬಹುದಲ್ಲದೇ, ಉಳಿದ ದಿನಗಳಲ್ಲಿ ನಮ್ಮ ದೇವಸ್ಥಾನದ ಕಾರ್ಯಾಲಯದಲ್ಲಿ ಬರೆಯಿಸಿ ನಮ್ಮ ಅವಗಾಹನೆಗೆ ತರಬಹುದು. ತಮ್ಮ ಸಲಹೆ-ಸೂಚನೆಗಳಿಗೆ ಸದಾ ಸ್ವಾಗತವಿರುತ್ತದೆ.

ದೇವಸ್ಥಾನದ ''ಶ್ರೀಮಹಾಮಾಯಾ ವಿದ್ಯಾನಿಧಿ ಫಂಡ್'' ಗೆ ಕುಳಾವಿಗಳಿಂದ ಬಹಳಷ್ಟು ಪ್ರೋತ್ಸಾಹ ಸಿಗುತ್ತಿದ್ದು ಈವರೆಗೆ ರೂ. 73 ಲಕ್ಷಕ್ಕಿಂತ ಮೇಲ್ಪಟ್ಟು ಹಣ ಸಂಗ್ರಹವಾಗಿದ್ದು ಹೆಚ್ಚಿನ ಬಡ ವಿದ್ಯಾರ್ಥಿಗಳಿಗೆ ಅನುಕೂಲವಾಗುತ್ತಿದೆ. ಈ ಹಿಂದೆ ಸಹಾಯಧನ ಪಡೆದ ವಿದ್ಯಾರ್ಥಿಗಳು ತಮ್ಮ ವಿದ್ಯಾಭ್ಯಾಸ ಮುಗಿಸಿ ವೃತ್ತಿನಿರತರಾಗಿದ್ದು, ಅವರಿಂದಲೂ ವಿದ್ಯಾನಿಧಿ ಫಂಡ್‌ಗೆ ದೇಣಿಗೆ ಬರುತ್ತಿರುವದು ತುಂಬ ಸಂತೋಷದ ವಿಷಯವಾಗಿದೆ. ಈ ವಿದ್ಯಾನಿಧಿಗೆ ನಮ್ಮ ದೇವಸ್ಥಾನದ ವತಿಯಿಂದಲೂ ಹೆಚ್ಚಿಗೆ ಹಣ ಸೇರ್ಪಡಿಸಿ ಉಳಿದ ವಿದ್ಯಾರ್ಥಿಗಳಿಗೂ ಧನಸಹಾಯ ಮಾಡುತ್ತಿದ್ದೇವೆ. ಈ ಕುರಿತು ಇನ್ನು ಮುಂದೆಯೂ ಸಹ ನಿಮ್ಮೆಲ್ಲರ ಪ್ರೋತ್ಸಾಹವನ್ನು ಬಯಸುತ್ತೇನೆ.

ಮುಂದಿನ ಪುಟಗಳಲ್ಲಿ ''ಕುಳಾವಿಗಳ ಅವಗಾಹನೆಗಾಗಿ ಸಾಮಾನ್ಯ ಮಾಹಿತಿಯನ್ನು ಕೊಟ್ಟಿರುತ್ತದೆ. ಅದನ್ನು ಗಮನಿಸಿರಿ.

ಕೊನೆಯದಾಗಿ ನಮ್ಮೆಲ್ಲ ಕುಳಾವಿ ಬಾಂಧವರಲ್ಲಿ ವಿನಂತಿಸಿಕೊಳ್ಳುವುದೇನೆಂದರೆ ನಮ್ಮ ನಾಗವೇ ಸಂಸ್ಥಾನಕ್ಕೆ ಸಂಬಂಧಪಟ್ಟಂತೆ ದೇವಸ್ಥಾನ ಪರಿಸರದ ಸ್ವಚ್ಛತೆ, ವಸತಿಗೃಹ, ಕ್ಯಾಂಟೀನ ಮತ್ತು ಊಟೋಪಚಾರದ ಬಗ್ಗೆ, ಪೂಜಾ ವಿಧಿ-ವಿಧಾನ ಸೇವೆಗಳ ಬಗ್ಗೆ, ಕಾರ್ಯಾಲಯದ ಸಿಬ್ಬಂದಿ ವರ್ಗದ ಬಗ್ಗೆ ಅಥವಾ ಸಂಸ್ಥಾನದಲ್ಲಿ ಯಾವುದೇ ಅನಾನುಕೂಲತೆಗಳ ಬಗ್ಗೆ ತೊಂದರೆಗಳಿದ್ದಲ್ಲಿ ಹಾಗೂ ಇನ್ನಾವುದೇ ಸಲಹೆ-ಸೂಚನೆಗಳಿದ್ದಲ್ಲಿ, ಸ್ವಂತ ನನ್ನ ವಿಳಾಸಕ್ಕೆ ಬರೆದು ದೇವಸ್ಥಾನದ ಕಾರ್ಯಾಲಯಕ್ಕೆ ತಿಳಿಸಿದಲ್ಲಿ, ಅವುಗಳನ್ನು ಯೋಗ್ಯವೆಂದು ಕಂಡುಬಂದಲ್ಲಿ ಸಾಧ್ಯವಾದಷ್ಟು ಮಟ್ಟಿಗೆ ಸೂಕ್ತ ಕ್ರಮಗಳನ್ನು ಕೈಗೊಳ್ಳಲಾಗುವುದೆಂದು ತಿಳಿಸಬಯಸುತ್ತೇನೆ.

ಕುಳಾವಿಗಳು ಗಮನಿಸಬೇಕಾದ ಇನ್ನೊಂದು ಮಹತ್ವದ ವಿಷಯವೇನೆಂದರೆ, ದೇವಸ್ಥಾನಕ್ಕೆ ಸಂಬಂಧಪಟ್ಟಂತೆ ಯಾವುದೇ ಅಧಿಕೃತ ''ಫೇಸಬುಕ್'' ಅಥವಾ ''ವಾಟ್ಸಪ್'' ಗ್ರುಪ್‌ಗಳಾಗಲಿ ಇರುವುದಿಲ್ಲ. ಇಂತಹವುಗಳಿಂದ ತಾವುಗಳು ತಪ್ಪು ಮಾಹಿತಿ ಪಡೆದು ವಂಚಿತರಾದಲ್ಲಿ ದೇವಸ್ಥಾನವು ಜವಾಬ್ದಾರಿಯಾಗಿರುವದಿಲ್ಲ. ದೇವಸ್ಥಾನದ ಪ್ರಮುಖ ವಾರ್ಷಿಕ ಉತ್ಸವಾದಿ ಕಾರ್ಯಕ್ರಮಗಳ ವಿವರ ಪ್ರತಿ ವರ್ಷ ಪ್ರಕಾಶಿತವಾಗುವ ರಾಯಸ ಪತ್ರದಲ್ಲಿ ಇರುತ್ತದೆ. ಹೊರತಾಗಿ ನಮ್ಮ ವೆಬ್‌ಸೈಟ್‌ನಲ್ಲಿ (www.nagvesamsthanankola.com) ಸಹ ಪಡೆಯುಬಹುದು. ಯಾವುದೇ ಅಧಿಕೃತ ಮಾಹಿತಿ ಬೇಕಾದಲ್ಲಿ ದೇವಸ್ಥಾನದ ಕಾರ್ಯಾಲಯಕ್ಕೆ ಫೋನ್/ ಇ-ಮೇಲ್/ಪತ್ರಗಳ ಮೂಲಕ ಸಂಪರ್ಕಿಸಿರಿ.

ಶ್ರೀ ಲಕ್ಷ್ಮೀನಾರಾಯಣ ಮಹಾಮಾಯಾ ದೇವರು ಸಮಸ್ತರಿಗೆ ಸನ್ಮಂಗಳವನ್ನು ಕರುಣಿಸಲೆಂದು ಪ್ರಾರ್ಥಿಸುವ,

ವೈಶಾಖ ಪೂರ್ಣಿಮೆ
12-05-2025

**ಶ್ರೀನಿವಾಸರಾವ ವಾಸುದೇವರಾವ್ ದೆಂಪೋ**
ಅಧ್ಯಕ್ಷರು, ಶ್ರೀ ಲಕ್ಷ್ಮೀನಾರಾಯಣ ಮಹಾಮಾಯಾ ದೇವಸ್ಥಾನ
ಹನುಮಟ್ಟಾ, ಅಂಕೋಲಾ.

# ❋ ಕುಳಾವಿಗಳ ಮಾಹಿತಿಗಾಗಿ ❋

● **ವಸ್ತ್ರಸಂಹಿತೆ :-** ದೇವಸ್ಥಾನದ ಒಳಗೆ ಪ್ರವೇಶಿಸುವ ಪ್ರತಿಯೊಬ್ಬ ಕುಳಾವಿ ಭಕ್ತಾದಿಗಳು ಈ ಕೆಳಗಿನಂತೆ ವಸ್ತ್ರಸಂಹಿತೆಯನ್ನು ಪಾಲಿಸುವುದು.

◆ **15 ವರ್ಷ ಮೇಲ್ಪಟ್ಟ ಪುರುಷರು ಧರಿಸಬೇಕಾದ ವಸ್ತ್ರ:**

ಬಿಳಿ ಬಣ್ಣದ ಲುಂಗಿ, ಫುಲ-ಪ್ಯಾಂಟ, ಶರ್ಟ, ಜುಬ್ಬಾ-ಪಾಯಜಾಮಾ, ಕುರ್ತಾ, ಅಂಗವಸ್ತ್ರ-ಬರಿಮೈಯಲ್ಲಿ ಇರುವವರು ಶಾಲನ್ನು (ಉಪವಸ್ತ್ರ) ಧರಿಸಬೇಕು.

**ನಿರ್ಬಂಧಕ್ಕೆ ಒಳಪಡುವ ವಸ್ತ್ರಸಂಹಿತೆ :-**

ಬಣ್ಣ-ಬಣ್ಣದ ಲುಂಗಿಗಳು, ಚಡ್ಡಿಗಳು, ಜೀನ್ಸ ಹಾಫ-ಪ್ಯಾಂಟಗಳು, ಕೊರಳು ಪಟ್ಟಿ ಇಲ್ಲದ ಟೀ-ಶರ್ಟಗಳು.

◆ **15 ವರ್ಷ ಮೇಲ್ಪಟ್ಟ ಮಹಿಳೆಯರು ಧರಿಸಬೇಕಾದ ವಸ್ತ್ರ:**

ಗಾಗರಾ-ಚೋಳಿ, ಸಲವಾರ-ಕಮೀಜ-ಓಢಣಿ, ಸೀರೆ

**ನಿರ್ಬಂಧಕ್ಕೆ ಒಳಪಡುವ ವಸ್ತ್ರ ಸಂಹಿತೆ :-**

ಮಿನಿ-ಮಿಡಿ ಸ್ಕರ್ಟಗಳು, ಹಾಫ ಪ್ಯಾಂಟಗಳು, ಜೀನ್ಸ ಬಟ್ಟೆಗಳು, ಕುರ್ತಿ, ಟೀ-ಶರ್ಟಗಳು.

● **ನಮ್ಮ ಕೆಲವು ಕುಳಾವಿಗಳು ದೇವಸ್ಥಾನದ ವೆಬ್-ಸೈಟನಲ್ಲಿ ಸೇವೆಗಳನ್ನು ಸಲ್ಲಿಸುವಂತೆ ವಿವರ ಇತ್ಯಾದಿಗಳನ್ನು ಕಳುಹಿಸುತ್ತಾರೆ. ಆದರೆ ಅವು ಕಾರ್ಯಾಲಯದ ಸಂಬಂಧ ಪಟ್ಟವರಿಗೆ ತಲುಪುವುದಿಲ್ಲ. ಆದ ಕಾರಣ ಕುಳಾವಿಗಳು ಸೇವೆ ಅಥವಾ ಇತರ ಯಾವುದೇ ತರಹದ ವಿವರ-ವಿಚಾರಣೆಗಾಗಿ ನಮ್ಮ ದೇವಸ್ಥಾನದ ಇ-ಮೇಲ್** (slmtmt@yahoo.com) **ನಲ್ಲಿ ವ್ಯವಹರಿಸುವುದು ಅಥವಾ ದೇವಸ್ಥಾನದ ಕಾರ್ಯಾಲಯದ ಸಿಬ್ಬಂದಿಗಳಿಂದ ಕೇಳಿ ತಿಳಿದುಕೊಳ್ಳುವುದು.**

● ವಿಶೇಷ ಉತ್ಸವಗಳ ಸಂದರ್ಭವನ್ನು ಬಿಟ್ಟು ಉಳಿದ ದಿನಗಳಲ್ಲಿ ಪ್ರತಿದಿನ ಮಧ್ಯಾಹ್ನ 12-00 ಘಂಟೆಗೆ ಹಾಗೂ ರಾತ್ರಿ 8-00 ಘಂಟೆಗೆ ಮಹಾಪೂಜೆಗಳು ಪ್ರಾರಂಭಗೊಳ್ಳುವವು.

● ಊಟೋಪಚಾರದ ಕ್ಯಾಂಟಿನ ಕೂಪನ್‌ಗಳು ದೇವಸ್ಥಾನದ ಕಾರ್ಯಾಲಯದಲ್ಲಿ ಮಧ್ಯಾಹ್ನ 12-30 ಮತ್ತು ರಾತ್ರಿ 7-30 ಘಂಟೆಗೆ ಮುಂಚಿತವಾಗಿ ಪಡೆದುಕೊಳ್ಳುವದು. ತದ ನಂತರ ಕೂಪನ್‌ಗಳು ವಿತರಣೆ ಇರುವದಿಲ್ಲ. ತಡವಾಗಿ ಬರುವವರಿಗಾಗಿಯೂ ಕೂಪನ್‌ಗಳು ಕಾಯ್ದಿಡುವಿಕೆಯ ಪದ್ಧತಿಯೂ ಇರುವದಿಲ್ಲ. ಕುಳಾವಿಗಳ ಆಗ್ರಹದ ಮೇರೆಗೆ ಖಾದ್ಯಪದಾರ್ಥಗಳನ್ನು ಕ್ಯಾಂಟೀನ್‌ನಲ್ಲಿ ಮಾಡಲು ಬರಲಾರದು. ದೇವಸ್ಥಾನದ ಕ್ಯಾಂಟಿನ್ ಪರಊರಿನಿಂದ ಬರುವ ಕುಳಾವಿಗಳ ಸದುಪಯೋಗಕ್ಕಾಗಿ ಇರುವದರಿಂದ ಎಲ್ಲ ಕುಳಾವಿಗಳು ಕ್ಯಾಂಟಿನ ಶಿಸ್ತಿಗೆ ಸಹಕರಿಸಬೇಕಾಗಿ ವಿನಂತಿ.

● ''ಅನ್ನದಾನ ಸೇವೆ''ಯಲ್ಲಿ ಪಾಲ್ಗೊಳ್ಳಬಯಸುವ ಕುಳಾವಿ ದಾನಿಗಳು, ಈ ಕೆಳಗೆ ನಮೂದಿಸಿದಂತಹ ತಮ್ಮ ಸೇವೆಯನ್ನು ಕಾರ್ಯಾಲಯಕ್ಕೆ ಮುಂಚಿತವಾಗಿ ತಿಳಿಸಿ ನೋಂದಾಯಿಸಿಕೊಳ್ಳುವುದು. ಮೊದಲು ನೋಂದಣಿದಾರರಿಗೆ ಮೊದಲು ಆದ್ಯತೆ ಕೊಡಲಾಗುವುದು.

| | | |
|---|---|---|
| ಅ) | ಒಂದು ದಿನದ ಪೂರ್ತಿ ಊಟೋಪಚಾರದ ಸೇವೆ<br>(ಚಹಾ ತಿಂಡಿ + ಮಧ್ಯಾಹ್ನದ ಪ್ರಸಾದ + ರಾತ್ರಿ ಪ್ರಸಾದ) | ರೂ. 8,000/- |
| ಆ) | ಮಧ್ಯಾಹ್ನದ ಅನ್ನದಾನ ಪ್ರಸಾದ ಸೇವೆ | ರೂ. 2,500/- |
| ಇ) | ರಾತ್ರಿ ಅನ್ನದಾನ ಪ್ರಸಾದ ಸೇವೆ | ರೂ. 2,500/- |
| ಈ) | ಚಹಾ ತಿಂಡಿ/ಉಪಹಾರ ಸೇವೆ | ರೂ. 2,500/- |

ದೇವಸ್ಥಾನಕ್ಕೆ ಸಂಬಂಧಪಟ್ಟ ವಿಶೇಷ ಉತ್ಸವ/ಸಂತರ್ಪಣೆ/ಕಾರ್ಯಕ್ರಮಗಳು ಹೊರತು ಪಡಿಸಿ ಉಳಿದ ದಿನಗಳಲ್ಲಿ ಮಾತ್ರ ಮೇಲಿನ ಸೇವೆಗಳು ಮಾಡಲ್ಪಡುವವು.

● ಸ್ವತಃ ಸೇವೆಯನ್ನು ಮಾಡಲು ಬರಲಾಗದ ಕುಳಾವಿಗಳು ಶ್ರೀ ಸನ್ನಿಧಿಯಲ್ಲಿ ಕಾಣಿಕೆ, ವಂತಿಗೆ ಮತ್ತು ಸೇವೆಗಳ ಹಣವನ್ನು ಡಿಡಿ, ಚೆಕ್, ಮೇಲ್ ಟ್ರಾನ್ಸಫರ್ ದ್ವಾರಾ ಕಳಿಸಬಹುದು. ಕಳಿಸುವಾಗ ತಮ್ಮ ಪೂರ್ತಿ ವಿಳಾಸ, ಸೇವೆಗಳ ವಿವರ,

ಉದ್ದೇಶ ಸ್ಪಷ್ಟವಾಗಿ ಬರೆಯಬೇಕೆಂದು ವಿನಂತಿ, ಬ್ಯಾಂಕ ಮೂಲಕ ಕಳುಹಿಸಿದ ಕುಳಾವಿಗಳು ಪ್ರತ್ಯೇಕವಾಗಿ ದೇವಸ್ಥಾನದ ಕಾರ್ಯಾಲಯಕ್ಕೆ ತಿಳಿಸುವುದರಿಂದ ತಮ್ಮ ಉದ್ದೇಶವನ್ನು ಸರಿಯಾಗಿ ತಿಳಿದುಕೊಳ್ಳಲು ಸಹಾಯವಾಗುವುದು.

● ಕುಳಾವಿ ಬಾಂಧವರು ತಮ್ಮ ದೇಣಿಗೆ, ಕಾಣಿಕೆ ಮತ್ತು ಸೇವೆಹಣವನ್ನು ಮೇಲ್ ಟ್ರಾನ್ಸ್‌ಫರ್ ಮಾಡಿ ಕಳಿಹಿಸುವಾಗ ಈ ಕೆಳಗಿನ ಟ್ರಸ್ಟ ಮತ್ತು ಅವುಗಳಿಗೆ ಸಂಬಂಧಪಟ್ಟ ಬ್ಯಾಂಕುಗಳ ಖಾತೆ ನಂಬರ್‌ಗಳನ್ನು ಗಮನಿಸಬೇಕಾಗಿ ವಿನಂತಿ.

ಖಾತೆ ಹೆಸರು :- ಶ್ರೀ ಲಕ್ಷ್ಮೀನಾರಾಯಣ ಮಹಾಮಾಯಾ ಟೆಂಪಲ್

1) ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ, ಅಂಕೋಲಾ
ಖಾತೆ ನಂ. 520101228152867
IFSC CODE : UBIN0900672

2) ಕೆನರಾ ಬ್ಯಾಂಕ್, ಅಂಕೋಲಾ
ಖಾತೆ ನಂ. 03042200000358
IFSC CODE : CNRB0010304

● ವಿವಿಧ ಸೇವಾ ಟ್ರಸ್ಟ್‌ಗಳಿಗೆ ಹಣ ಕಳುಹಿಸುವವರು, ದೇವಸ್ಥಾನದ ಕಾರ್ಯಾಲಯಕ್ಕೆ ಸಂಪರ್ಕಿಸಿ ಟ್ರಸ್ಟಗಳ ಖಾತೆ ನಂಬರ್ ಪಡೆದು ತಮ್ಮ ದೇಣಿಗೆಯನ್ನು ಸಲ್ಲಿಸುವುದು.

● ವಸ್ತುಗಳ ರೂಪದಲ್ಲಿ ದೇಣಿಗೆಯನ್ನು ನೀಡುವ ಕುಳಾವಿಗಳು ದೇವಸ್ಥಾನದ ಕಾರ್ಯಾಲಯಕ್ಕೆ ಒಪ್ಪಿಸಿ ರಶೀದಿ ಪಡೆದುಕೊಳ್ಳುವುದು.

● ದೇವಸ್ಥಾನದ ವಿಶೇಷ ಉತ್ಸವಗಳ ದಿನದಂದು ಕುಳಾವಿಗಳು ತಮ್ಮ ಸ್ವಂತ ಕಾರ್ಯಕ್ರಮಗಳು/ಮಂಗಳಕಾರ್ಯಗಳು ಮಾಡಲು ಬರಲಾರದು. ಕಾರ್ಯಾಲಯದಲ್ಲಿ ವಿಚಾರಿಸಿ ತಿಳಿದುಕೊಳ್ಳುವುದು.

● ದೇವಸ್ಥಾನದ ಪದ್ಧತಿಯಂತೆ ಪ್ರತಿ ಏಕಾದಶಿಯಂದು ಮತ್ತು ಕೆಲವೊಂದು ವಿಶೇಷ ದಿನಗಳಂದು ದೇವರಲ್ಲಿ ಯಾವುದೇ ತರಹದ ಸೇವೆಗಳು ಮಾಡಲ್ಪಡುವುದಿಲ್ಲ. ಕೆಲವೊಂದು ಮಹತ್ವದ ಉತ್ಸವದ ದಿನಗಳಂದು ಕೂಡ ಉತ್ಸವದ ನಿಮಿತ್ತ ಕೆಲವು ಸೇವೆಗಳು ಮಾಡಲು ಬರುವುದಿಲ್ಲ. ಪುಷ್ಪಪೂಜೆಗಳು ರಾತ್ರಿ ಮಂಗಳಾರತಿ

ಸಮಯದಲ್ಲಿ ಮಾತ್ರ ಮಾಡಲ್ಪಡುತ್ತವೆ, ಈ ಬಗ್ಗೆ ಮೊದಲೇ ಕಾರ್ಯಾಲಯದಲ್ಲಿ ವಿಚಾರಿಸಿ ತಿಳಿದುಕೊಳ್ಳುವುದು.

● ಎಲ್ಲ ಕುಳಾವಿ ಬಾಂಧವರಿಗೆ ಪ್ರಸಾದ ತಲುಪಬೇಕೆಂಬ ಸದಿಚ್ಛೆಯಿಂದ ವಿಳಾಸಗಳನ್ನು ಸಂಗ್ರಹಿಸಿದ್ದೇವೆ. ವಿಳಾಸದಲ್ಲಿ ಬದಲಾವಣೆಗಳಾದಲ್ಲಿ ಇಲ್ಲವೇ ರಾಯಸ ಪತ್ರಿಕೆ ತಲುಪುತ್ತಿಲ್ಲವಾದಲ್ಲಿ ಕುಳಾವಿ ಬಾಂಧವರು ದೇವಸ್ಥಾನದ ಕಾರ್ಯಾಲಯಕ್ಕೆ ತಿಳಿಸಿ ಸರಿಪಡಿಸಿಕೊಳ್ಳಬೇಕಾಗಿ ವಿನಂತಿ.

● ಕುಳಾವಿಗಳು ನೀಡುವ ಕಾಣಿಕೆ, ದೇಣಿಗೆ, ವಂತಿಗೆಗಳು ರೂ. 2500/- ಅಥವಾ ಹೆಚ್ಚಿಗೆ ಇದ್ದಲ್ಲಿ ಚೆಕ್/ಡಿಡಿ ಮೂಲಕ ನೀಡಬೇಕಾಗಿ ವಿನಂತಿ ಹಾಗೂ ರೂ.10000/- ಅಥವಾ ಹೆಚ್ಚಿಗೆ ನೀಡುವ ಕುಳಾವಿಗಳು ತಮ್ಮ ಪ್ಯಾನ್ ಕಾರ್ಡ್ ಪ್ರತಿಯನ್ನು ಕೊಡತಕ್ಕದ್ದು.

● ವಿದೇಶೀ ಹಣ (ಕರನ್ಸಿ) ದ ದೇಣಿಗೆ ಸ್ವೀಕರಿಸಲಾಗುವುದಿಲ್ಲ.

● ಪ್ರತಿವರ್ಷದಂತೆ ವಡೆ ಪಂಚಮಿಯ ಮಹಾಅನ್ನಸಂತರ್ಪಣೆಯ ನಂತರ ''ಕುಳಾವಿಗಳ ಸಾಮಾನ್ಯ ಸಭೆ'' ಯು ಕಾರ್ಯಾಲಯದಲ್ಲಿ ಜರುಗುವುದು. ಇದಕ್ಕೆ ಎಲ್ಲ ಕುಳಾವಿಗಳು ಭಾಗವಹಿಸುವುದು.

## ವಸತಿಗೃಹದ ಕೊಠಡಿ ದಾನಿಗಳ ಗಮನಕ್ಕೆ

1) ದೇವಸ್ಥಾನದಲ್ಲಿ ಜರುಗುವ ಪ್ರಮುಖ ಉತ್ಸವಗಳಾದ ವಿಜಯಾದಶಮಿ, ವಡೇ ಪಂಚಮಿ, ಶತಚಂಡಿ ಹವನ ವ ಇತರೆ ಉತ್ಸವಗಳ ಸಂದರ್ಭದಲ್ಲಿ ತಮ್ಮ-ತಮ್ಮ ಕೊಠಡಿಗಳನ್ನು ತಮಗೇ ಕಾಯ್ದಿರಿಸಲಾಗುವುದು. ಈ ಬಗ್ಗೆ ಉತ್ಸವದ ಸಮಯದಲ್ಲಿ ವಾಸ್ತವ್ಯ ಮಾಡಲಿಚ್ಛಿಸುವ ದಾನಿಗಳು 5 ದಿನ ಮುಂಚಿತವಾಗಿ ದೇವಸ್ಥಾನದ ಕಾರ್ಯಾಲಯಕ್ಕೆ ತಿಳಿಸುವುದು. ಇದಕ್ಕೆ ತಪ್ಪಿದಲ್ಲಿ ತಮ್ಮ ಕೊಠಡಿಗಳನ್ನು ಉತ್ಸವಕ್ಕೆ ಬಂದಂತಹ ಕುಳಾವಿಗಳಿಗೆ ವಾಸ್ತವ್ಯಕ್ಕೆ ಕೊಡಲಾಗುವುದು, ತಿಳಿದಿರಲಿ.

2) ಉತ್ಸವದ ದಿನಗಳನ್ನು ಹೊರತು ಪಡಿಸಿ, ಉಳಿದ ದಿನಗಳಲ್ಲಿ ದಾನಿಗಳು ವಾಸ್ತವ್ಯ ಮಾಡುವದಿದ್ದಲ್ಲಿ 3 ದಿನ ಮುಂಚಿತವಾಗಿ ಕಾರ್ಯಾಲಯಕ್ಕೆ ತಿಳಿಸಬೇಕು. ತಪ್ಪಿದಲ್ಲಿ ಅವರ ಕೊಠಡಿಗಳನ್ನು ದೇವಸ್ಥಾನಕ್ಕೆ ಬಂದ ಕುಳಾವಿಗಳಿಗೆ ಕೊಡಲಾಗುವದು.

● ಕುಳಾವಿಗಳು ಕೊಠಡಿಯಲ್ಲಿ 3 ದಿನಗಳಿಗಿಂತ ಹೆಚ್ಚು ವಾಸ್ತವ್ಯ ಮಾಡಲಾಗುವದಿಲ್ಲ. ವಾಸ್ತವ್ಯ ಹೆಚ್ಚಿಸಬೇಕಾದಲ್ಲಿ ಕಾರ್ಯಾಲಯಕ್ಕೆ ಮುಂಚಿತವಾಗಿ

ತಿಳಿಸಿ ಧರ್ಮದರ್ಶಿ ಮಂಡಳಿಯ ಅನುಮತಿ ಪಡೆಯತಕ್ಕದ್ದು.

● ಫೋನ್ ಅಥವಾ ಪತ್ರದ ಮೂಲಕ ಕೊಠಡಿಗಳನ್ನು ಮುಂಚಿತವಾಗಿ ಕಾಯ್ದಿರಿಸುವ ಪದ್ಧತಿ ಇರುವುದಿಲ್ಲ. ಬಂದ ಕುಳಾವಿಗಳಿಗೆ ಆದ್ಯತೆಯ ಮೇರೆಗೆ ಕೊಠಡಿಗಳನ್ನು ವಿತರಿಸಲಾಗುವುದು.

● ಕುಳಾವಿಗಳು ರೂಮ್‌ಗಳನ್ನು ಪಡೆಯುವ ಮೊದಲು ತಮ್ಮ ಗುರುತಿನ ಚೀಟಿಯ ನಕಲನ್ನು ನೀಡಿ ರಜಿಸ್ಟರನಲ್ಲಿ ದಾಖಲಾತಿ ಆವಶ್ಯಕ.

● ಇನ್ನು ಮುಂದೆ ಮನಿಆರ್ಡರ ಮೂಲಕ ಬಂದ ಹಣವನ್ನು ಕೇವಲ ಕಾಣಿಕೆ ಯಾಗಿ ಮಾತ್ರ ಸ್ವೀಕರಿಸಲಾಗುವುದು. ಕಾರಣ ಹೊಸ ಇ-ಮನಿಆರ್ಡರ್ ಫಾರ್ಮ ನಲ್ಲಿ ಯಾವದೇ ಸೇವಾ ಮಾಹಿತಿ ಬರೆಯುವ ಅವಕಾಶವಿಲ್ಲ.

● 'ವಿದ್ಯಾನಿಧಿ'ಗೆ ಅರ್ಜಿ ತಲುಪುವ ಕೊನೆಯ ದಿನಾಂಕ 31 ಆಗಸ್ಟ 2025.

● ತಾ: 03-05-2022 ಮಂಗಳವಾರ ವೈಶಾಖ ಶುದ್ಧ ತೃತೀಯಾ (ಅಕ್ಷಯ ತೃತೀಯಾ) ದಂದು ಶ್ರೀ ಪುರುಷರ ಆವೇಶದಲ್ಲಿ ಉಲ್ಲೇಖಿಸಿದಂತೆ ವಡೆ ಪಂಚಮಿಯ ದಿನದಂದು ದೇವಸ್ಥಾನದ ಗಾಂವಕಾರರೊಂದಿಗೆ, ದೆಂಪೋ ಮನೆತನದವರೊಬ್ಬರು ಮತ್ತು ಮಹಾಲೆ ಮನೆತನದವರೊಬ್ಬರನ್ನು ಬಿಟ್ಟು ಇನ್ನಾರೂ ಶ್ರೀ ಭಗವತಿ ಗುಡಿಯಲ್ಲಿ ಪ್ರವೇಶಿಸತಕ್ಕದ್ದಲ್ಲ. ಅಲ್ಲದೆ ಕೈಯಿಂದ ವಡೆ ತೆಗೆಯುವ ಸಂದರ್ಭದಲ್ಲಿ ಶ್ರೀ ದೇವಸ್ಥಾನದ ಗಾಂವಕಾರರನ್ನು ಹೊರತುಪಡಿಸಿ ಇನ್ನಾವ ಕುಳಾವಿಗಳು ವಡೆ ಕಾವಲಿಗೆ ಕೈ ಹಾಕುವುದಾಗಲಿ, ವಡೆಕಾವಲಿಯ ಎಣ್ಣೆ ಮುಟ್ಟುವುದಾಗಲಿ ಮಾಡತಕ್ಕದ್ದಲ್ಲ. ಇದಕ್ಕೆ ತಪ್ಪಿದಲ್ಲಿ ಶ್ರೀ ಭಗವತಿ ದೇವರ ಅವಕೃಪೆಗೆ ಪಾತ್ರರಾಗುವಿರಿ ಎಂದು ಆದೇಶಿಸಲಾಗಿದೆ ತಿಳಿದಿರಲಿ.

● ದೇವಸ್ಥಾನದ ಸೇವೆಗಳ, ಉತ್ಸವಗಳ ವಾಸ್ತವ್ಯ ಇನ್ನಾವುದೇ ಮಾಹಿತಿಗಳೂ ಬೇಕಾದಲ್ಲಿ ದೇವಸ್ಥಾನ ಕಾರ್ಯಾಲಯಕ್ಕೆ ದೂರವಾಣಿ ಅಥವಾ **E-mail** ಮುಖಾಂತರ ಸಂಪರ್ಕಿಸಿ ಖಚಿತಪಡಿಸಿಕೊಳ್ಳುವುದು. ಯಾರಿಂದಲೋ ತಪ್ಪು ಮಾಹಿತಿ ಪಡೆದುಕೊಂಡಲ್ಲಿ ಅದಕ್ಕೆ ದೇವಸ್ಥಾನವು ಜವಾಬ್ದಾರಿಯಾಗಿರುವುದಿಲ್ಲ.

ಕಾರ್ಯಾಲಯದ ಫೋನ್ ನಂ. (08388) 230222, 295644

Cell : 8105895644, E-mail : slmtmt@yahoo.com

Website : www.nagvesamsthanankola.com

Shree Samsthan Nagve Gomantak

# Shree Lakshminarayan Mahamaya Temple

***(Private Temple of the Kulavis)***

Hanumatta, Post: Vandige, Ankola - 581 357 (UK).

Dear Kulavis,

Season's greetings. My best wishes for a Happy New Year.

"Krodhi" Naam Samvatsar has just ended. All the festivals in this Samvatsar were celebrated in the age-old traditions of the Temple full of gaiety and piety. The Devakarya was celebrated with splendour. The first round of *AnnaDaana* was finished in time for Kulavis to return back their native. I am really heartened to note that this festival is, by the grace of our Kula Devatas, being celebrated without any impediments. I pray to the Kula devatas to continue to bless us to celebrate this festival in this manner in the future years.

The Shata Chandi Havana was performed in Chaitra Masa in the usual manner. The Parayana and the Havana by Archaks were done nicely and the Kulavis who attended may have experienced an inner upliftment at the time of the Poornaahuti. The festival concluded in

time to the satisfaction of all. A packet of the Vibhuti is enclosed. Kindly accept the same and be blessed.

I take this opportunity to place on record my appreciation and gratitude to all the Archaks and the Kulavis who participated in both these festivals.

Apart from all this my personal thanks to each and every kulavis as well as devotees, who have given their full supports and co-operation for the celebration of each and every festivals, Utsavas, Kartik Vanabojan etc which are celebrated in this Samsthan.

Apart from that Mahamaya development works are to be carried in coming years. As per our desire, still some works are pending, like solar electricity generation project is still on the board. Repair work of "Kalyani" lake infront of Shree Ishwar Temple, some of the old vasati graha rooms renovation with installtion of Airconditioner, many more rooms renovation will be carried during this rainy season. If any room donor Kulavis are interested for the installation of Air-conditioner for their rooms please contact Temple office for more information.

We are happy to inform you that a special function is celebrated on 11/01/2025 on the eve of “Shree Ramlalla

Pratistapana" day at Ayodhya. From morning to evening Ram-nam japa, Bhajanas, verity of so many naivedyas, deepotsava and night pooja mangalarati are carried by all kulavi devotees and concluded with night upahar seva.

Also old age Temple "Sheja Mali" building is to be repaired with copper sheet roofing works. The 'Ratha' which is used during the procession of "Kartikotsava" vanabhojana function is to be rebuilt newly with silver sheet coating. Most of the Kulavis contributed for this work and any more interested Kulavis can contribute their donation by contacting Temple office.

The corpus of the Temple "Vidya Nidhi" Fund has grown to Rs. 73 lakhs. I am happy to inform that, many more students who have taken the benefit of this scholarship during their studies, they are also refunding for this "Vidya Nidhi" Fund after their job settlement etc. while this is encouraging. Kindly contribute generously to this fund so that we can provide financial assistance to more poor Kulavi students.

Please go through the General Information and other information provided in this booklet for your assistance and convenience.

Lastly I request Kulavis to write to me in confidence at the Temple address their comments and suggestions about the Temple administration, Temple environs, cleanliness of and housekeeping in the vasathi-gruha, Canteen food and hygiene, pooja-vidhis, Archak & staff attitude and approach, and the facilities in the Temple. I assure you that I shall pursue them and take suitable action wherever possible and feasible.

All kulavis are requested to note that the Temple doesn't have any authorized **Facebook or WhatsApp** groups. Hence, temple is not at all responsible if you got any fake news/informations from those.

All temple main Annual Festivals are announced only through printed RAYAS PATRA published once a year, and the same is posted in temple website. (www.nagvesamsthanankola.com) For any more information pleae contact temple office by phone / email / letter Etc.

I conclude with prayers to Shri Lakshminarayana and Shri Mahamaya for the well-being of all Kulavis and to bestow upon all of us their blessings.

Vaishakh Pournima
12-5-2025

**Srinivasrao Vasudevrao Dempo**
President,
Shree Lakshminarayana Mahamaya Temple
Hanumatta, Ankola.

# General Information

- **Dress Code:** The following dress code will be applicable to all Kulavis and devotees who wish to enter the Chowk of the Temple.

◆ **Recommended dress for males above the age of 15**

Adda Panche, Dhoti, Full pants, Shirts and Jubbas, Pyjama Kurta, Anga vastra. Bear chested boys and men should have shawls (upparne).

**Prohibited attire :–**

Designer and coloured lungis, shorts, jeans, round necked T-shirts with or without designs

◆ **Recommended dress for females above the age of 15**

Saree, Salwar kameez, Ghagra Cholee

**Prohibited attire :–**

Shorts, mini and midi skirts, jeans, kurtis, round necked T-Shirts.

Kindly note the same and co-operate.

- KULAVIS ARE REQUESTED NOT TO USE THE WEBSITE FOR GIVING INSTRUCTIONS REGARDING ANY SEVAS TO BE PERFORMED IN THE TEMPLE. YOUR INSTRUCTIONS OR REQUESTS, IF ANY, SHOULD BE CONVEYED BY E-MAIL (slmtmt@yahoo.com) OR BY POST. PLEASE NOTE AND OBLIGE.

- On all days other than the days on which Vishesha Utsavas and or Special festivals are celebrated the DAILY MAHAPOOJAS are performed at 12.00 p.m. in the afternoon and at 8.00 p.m. at night.
- Canteen coupons will not be issued after 12.30 p.m. in the afternoon and 7.30 p.m. in the evening. Please note requests to prepare any specific dishes will not be entertained. Please note reserving meals for people reaching the Temple very late is also generally not accepted. However, Kulavis may contact the office in case of any exigency. Kindly note that the Temple canteen is not a restaurant, but a convenience for the Kulavis. Therefore, Kulavis are requested to cooperate.
- Kulavis visiting the Temple are requested to verify from the office whether their addresses are registered with Temple. Please register your address or change in your address (along with your e-mail address, if any) in the office.
- Please note that no sevas, including Vadhu Vara bheti, are performed on Ekadashi, Vijayadashami, Vade Panchami and the Poornahuti day of Shata Chandi Havana. Pushpa Poojas are offered only at night Mangalarathi.
- The charges for celebrating commemorative days in the Temple are as follows :

– Full day's Seva in the canteen ............. Rs. 8,000-00
– Breakfast (Morning Tea Etc.) ................. Rs. 2,500-00
– Afternoon Prasad ....................................... Rs. 2,500-00
– Night Prasad ............................................... Rs. 2,500-00
– Preference will be given to the request RECEIVED FIRST

– No request for commemorative celebration will be accepted for any Panchami Festival day, Vijaya Dashami, Vade Panchami, Shata Chandi Havana Days and days on which Vishesh Poojas/Utsavs are held.

- KULAVIS UNABLE TO PERFORM PERSONALLY THE SEVAS OF THEIR CHOICE CAN HAVE THEM PERFORMED IN THE TEMPLE BY REMITTING THE REQUIRED AMOUNT BY BANK DRAFT OR MAIL TRANSFER THROUGH BANKS. THOSE REMITTING MONEY BY MAIL TRANSFER/OTHER BANK MONEY TRANSFER SYSTEM ARE REQUESTED TO ADVISE THE OFFICE SEPARATELY THE PARTICULARS OF MONEY TRANSFERRED AND THE PURPOSE IN DETAIL. THIS IS ESSENTIAL AS THE BANKS OFTEN DO NOT PROVIDE US THE ADVICES FOR MONEY/ MAIL TRANSFERS.
- Particulars of accounts maintained by the Temple :

  Name : **Shree Lakshminarayan Mahamaya Temple**

  – **Union Bank of India Ankola**
  **A/c No.520101228152867**
  **IFSC Code No.UBIN0900672**

  – **Canara Bank Ankola,**
  **A/c. No. 03042200000358**
  **IFSC Code No. CNRB0010304**
- Kulavis are requested to tender all contribution in kind through the Temple office and obtain a receipt. The office staff will guide you about the procedure to do the "Krishnarpana".
- Please note Kanuk, Donations, Contributions in the sum of Rs.2,500 and above will be accepted in Cheques/

DDs only. Also, those Kulavis wishing to donate Rs.10,000 & above shall provide their PAN Card copies.

- Please Note : We cannot accept Foreign currency donations.
- General Council of the Temple will meet immediately after the Mahasantarpana on the Vade Panchami Day in the office block of the Temple.

**For the attention of Room Sponsors**

1) **Rooms will be kept at their disposal during the celebration of major festivals in the Temple such as Vijaya Dashami, Vade Panchami, Shata Chandi Havan, Bhangra Mahamaya Utsav, for such period/days as the room/s will be occupied by them. Still however donors are requested to intimate to the temple office about their stay in their concerned rooms atleast 5 days in advance. If the temple office does not get any information within stipulated time then the rooms will be alloted to some other kulavis.**
2) **They are also requested to inform the Temple Office 3 days in advance if they or any other kulavi persons nominated by them intend to occupy the room/s, during the rest of the year.**
3) **In the absence of such notice the management shall be free to allot the room/s to any other devotee.**

- **The period of occupancy shall be restricted to three days/nights, except during the duration of festivals denoted above. For any exceptions, prior permission should be obtained from the Temple office.**

- **All Kulavis please note, in our Temple there is no room reservation / booking system either by phone / letter etc. in advance. Allotment of rooms will be done on "First Come First Served" basis only.**
- **Kulavis should provide copy of proof of their Identity before occupying rooms, is to be entered in the register kept in the office.**
- Henceforth money Received by way of Money Order will be accepted as Kanika only, as the new E-money order forms do not contain description of sevas to be conducted.
- Last date to receive scholarship application to Temple office is 31st August 2025.
- **On 03-05-2022 Vaishaka Shuddha Tritiya (Akshay tritiya day) the temple oracle uttered that on Vadepanchami day nobody should enter in Shree Bhagawati Temple except the family representative of Dempo and Mahale along with Gaonkar. And also note that nobody should put their hands in boiling oil or not to touch the oil pan except Temple Gaonkar. In spite of this instruction of temple oracle, anybody touches the Vade Pan or oil they will be displeasure (contempt) of Goddess Shri Bhagavati please note.**
- FOR ANY INFORMATION ABOUT SEVAS, TARIFFS, SERVICES AND AVAILABILITY OF ROOMS ETC. PLEASE CONTACT THE TEMPLE OFFICE. THE TEMPLE IS NOT RESPONSIBLE FOR ANY WRONG INFORMATION PROVIDED BY ANY OTHER SOURCE.

TELEPHONE Nos. : (08388) 230222, 295644

Cell : 8105895644, E-mail : slmtmt@yahoo.com

Website : www.nagvesamsthanankola.com

# श्री शके १९४७ विश्वावसु नाम संवत्सर २०२५-२०२६

## देवस्थानामध्ये साजरे होणारे प्रमुख उत्सव

| | | |
|---|---|---|
| शतचंडी, लघुविष्णू हवन<br>चैत्र वद्य तृतीया ते पंचमी ते | बुधवार<br>शुक्रवार | १६-०४-२०२५<br>१८-०४-२०२५ |
| नाग पंचमी | मंगळवार | २९-०७-२०२५ |
| घटस्थापना (आश्विन शुद्ध प्रतिपदा) | सोमवार | २२-०९-२०२५ |
| महानवमी (आश्विन शुद्ध नवमी) | बुधवार | ०१-१०-२०२५ |
| विजया दशमी (आश्विन शुद्ध दशमी) | गुरुवार | ०२-१०-२०२५ |
| वडे पंचमी देवकार्य (आश्विन वद्य पंचमी) | शनिवार | ११-१०-२०२५ |
| कौलपूजा (आश्विन वद्य त्रयोदशी) | रविवार | १९-१०-२०२५ |
| वनभोजन उत्सव (कार्तिक पौर्णिमा) | बुधवार | ०५-११-२०२५ |
| पर्व पंचमी (मार्गशीर्ष शुद्ध पंचमी) | मंगळवार | २५-११-२०२५ |
| दीवज पंचमी (माघ शुद्ध पंचमी) | शुक्रवार | २३-०१-२०२६ |
| होलिका उत्सव (फाल्गुण पौर्णिमा) | सोमवार | ०२-०३-२०२६ |
| सुग्गी उत्सव (फाल्गुण वद्य द्वितीया) | बुधवार | ०४-०३-२०२६ |

## विश्वावसु नाम संवत्सरातील पंचमी दिवस

| | शुद्ध | | वद्य | |
|---|---|---|---|---|
| चैत्र | बुधवार | ०२-०४-२०२५ | शुक्रवार | १८-०४-२०२५ |
| वैशाख | शुक्रवार | ०२-०५-२०२५ | शनिवार | १७-०५-२०२५ |
| ज्येष्ठ | शनिवार | ३१-०५-२०२५ | सोमवार | १६-०६-२०२५ |
| आषाढ | सोमवार | ३०-०६-२०२५ | मंगळवार | १५-०७-२०२५ |
| श्रावण | मंगळवार | २९-०७-२०२५ | बुधवार | १३-०८-२०२५ |
| भाद्रपद | गुरुवार | २८-०८-२०२५ | शुक्रवार | १२-०९-२०२५ |
| आश्विन | शनिवार | २७-०९-२०२५ | शनिवार | ११-१०-२०२५ |
| कार्तिक | रविवार | २६-१०-२०२५ | रविवार | ०९-११-२०२५ |
| मार्गशीर्ष | मंगळवार | २५-११-२०२५ | मंगळवार | ०९-१२-२०२५ |
| पुष्य | गुरुवार | २५-१२-२०२५ | बुधवार | ०७-०१-२०२६ |
| माघ | शुक्रवार | २३-०१-२०२६ | शुक्रवार | ०६-०२-२०२६ |
| फाल्गुण | रविवार | २२-०२-२०२६ | रविवार | ०८-०३-२०२६ |

# ಶ್ರೀ ಶಕ 1947 ವಿಶ್ವಾವಸು ನಾಮ ಸಂವತ್ಸರ 2025-2026

## ದೇವಸ್ಥಾನದಲ್ಲಿ ಜರುಗುವ ಪ್ರಮುಖ ವಾರ್ಷಿಕ ಉತ್ಸವಗಳು

| | | |
|---|---|---|
| ಶತಚಂಡಿ, ಲಘುವಿಷ್ಣು ಹವನ...................... | ಬುಧವಾರ | 16-04-2025 |
| ಚೈತ್ರ ವದ್ಯ ತದಿಗೆಯಿಂದ ಪಂಚಮಿವರೆಗೆ ರಿಂದ | ಶುಕ್ರವಾರ | 18-04-2025 |
| ನಾಗರ ಪಂಚಮಿ | ಮಂಗಳವಾರ | 29-07-2025 |
| ಘಟಸ್ಥಾಪನೆ (ಆಶ್ವೀನ ಶುದ್ಧ ಪ್ರತಿಪದಾ) | ಸೋಮವಾರ | 22-09-2025 |
| ಮಹಾನವಮಿ (ಆಶ್ವೀನ ಶುದ್ಧ ನವಮಿ) | ಬುಧವಾರ | 01-10-2025 |
| ವಿಜಯ ದಶಮಿ (ಆಶ್ವೀನ ಶುದ್ಧ ದಶಮಿ) | ಗುರುವಾರ | 02-10-2025 |
| ವಡೇ ಪಂಚಮಿ ದೇವಕಾರ್ಯ(ಆಶ್ವೀನ ವದ್ಯ ಪಂಚಮಿ) | ಶನಿವಾರ | 11-10-2025 |
| ಕೌಲಪೂಜೆ (ಆಶ್ವೀನ ವದ್ಯ ತ್ರಯೋದಶಿ) | ರವಿವಾರ | 19-10-2025 |
| ವನಭೋಜನ ಉತ್ಸವ (ಕಾರ್ತಿಕ ಪೌರ್ಣಿಮಾ) | ಬುಧವಾರ | 05-11-2025 |
| ಪರ್ವ ಪಂಚಮಿ (ಮಾರ್ಗಶೀರ ಶುದ್ಧ ಪಂಚಮಿ) | ಮಂಗಳವಾರ | 25-11-2025 |
| ದೀವಜ ಪಂಚಮಿ (ಮಾಘ ಶುದ್ಧ ಪಂಚಮಿ) | ಶುಕ್ರವಾರ | 23-01-2026 |
| ಹೋಳಿ ಉತ್ಸವ (ಫಾಲ್ಗುಣ ಪೌರ್ಣಿಮಾ) | ಸೋಮವಾರ | 02-03-2026 |
| ಸುಗ್ಗೀ ಉತ್ಸವ (ಫಾಲ್ಗುಣ ವದ್ಯ ದ್ವಿತಿಯಾ) | ಬುಧವಾರ | 04-03-2026 |

## ವಿಶ್ವಾವಸು ನಾಮ ಸಂವತ್ಸರದ ಪಂಚಮಿಗಳು

| | ಶುದ್ಧ | | ವದ್ಯ | |
|---|---|---|---|---|
| ಚೈತ್ರ | ಬುಧವಾರ | 02-04-2025 | ಶುಕ್ರವಾರ | 18-04-2025 |
| ವೈಶಾಖ | ಶುಕ್ರವಾರ | 02-05-2025 | ಶನಿವಾರ | 17-05-2025 |
| ಜ್ಯೇಷ್ಠ | ಶನಿವಾರ | 31-05-2025 | ಸೋಮವಾರ | 16-06-2025 |
| ಆಷಾಢ | ಸೋಮವಾರ | 30-06-2025 | ಮಂಗಳವಾರ | 15-07-2025 |
| ಶ್ರಾವಣ | ಮಂಗಳವಾರ | 29-07-2025 | ಬುಧವಾರ | 13-08-2025 |
| ಭಾದ್ರಪದ | ಗುರುವಾರ | 28-08-2025 | ಶುಕ್ರವಾರ | 12-09-2025 |
| ಆಶ್ವೀನ | ಶನಿವಾರ | 27-09-2025 | ಶನಿವಾರ | 11-10-2025 |
| ಕಾರ್ತಿಕ | ರವಿವಾರ | 26-10-2025 | ರವಿವಾರ | 09-11-2025 |
| ಮಾರ್ಗಶೀರ | ಮಂಗಳವಾರ | 25-11-2025 | ಮಂಗಳವಾರ | 09-12-2025 |
| ಪುಷ್ಯ | ಗುರುವಾರ | 25-12-2025 | ಬುಧವಾರ | 07-01-2026 |
| ಮಾಘ | ಶುಕ್ರವಾರ | 23-01-2026 | ಶುಕ್ರವಾರ | 06-02-2026 |
| ಫಾಲ್ಗುಣ | ರವಿವಾರ | 22-02-2026 | ರವಿವಾರ | 08-03-2026 |

# Shree Shaka 1947 Vishwavasu Naam Samvatsara 2025-26

## Main Annual Festivities of the Devasthan

| | | | |
|---|---|---|---|
| Shatachandi & Laghuvishnu Havana.................. | | Wednesday | 16-04-2025 |
| Chaitra vadya Tadige to Panchami | To | Friday | 18-04-2025 |
| Nagara Panchami | | Tuesday | 29-07-2025 |
| Ghatasthapana (Ashwin Shuddha Pratipada) | | Monday | 22-09-2025 |
| Mahanavami (Ashwin Shuddha Navami) | | Wednesday | 01-10-2025 |
| Vijaya Dashami (Ashwin Shuddha Dashami) | | Thursday | 02-10-2025 |
| Vade Panchami Devkarya (Ashwin Vadya Panchami) | | Saturday | 11-10-2025 |
| Koul Pooja (Ashwin Vadya Trayodashi) | | Sunday | 19-10-2025 |
| Vana Bhojana Utsava (Kartik Pournima) | | Wednesday | 05-11-2025 |
| Parva Panchami (Margashira Shuddha Panchami) | | Tuesday | 25-11-2025 |
| Deevaja Panchami (Maagha Shuddha Panchami) | | Friday | 23-01-2026 |
| Holi Utsav (Phalguna Pournima) | | Monday | 02-03-2026 |
| Suggi Utsav (Phalguna Vadya Dwitiya) | | Wednesday | 04-03-2026 |

## Panchami's of Vishwavasu Naam Samvatsara

| | Shuddha | | Vadya | |
|---|---|---|---|---|
| Chaitra | Wednesday | 02-04-2025 | Friday | 18-04-2025 |
| Vaishakha | Friday | 02-05-2025 | Saturday | 17-05-2025 |
| Jyeshtha | Saturday | 31-05-2025 | Monday | 16-06-2025 |
| Ashadha | Monday | 30-06-2025 | Tuesday | 15-07-2025 |
| Shravana | Tuesday | 29-07-2025 | Wednesday | 13-08-2025 |
| Bhadrapada | Thursday | 28-08-2025 | Friday | 12-09-2025 |
| Ashwina | Saturday | 27-09-2025 | Saturday | 11-10-2025 |
| Kartika | Sunday | 26-10-2025 | Sunday | 09-11-2025 |
| Margashira | Tuesday | 25-11-2025 | Tuesday | 09-12-2025 |
| Pushya | Thursday | 25-12-2025 | Wednesday | 07-01-2026 |
| Maagha | Friday | 23-01-2026 | Friday | 06-02-2026 |
| Phalguna | Sunday | 22-02-2026 | Sunday | 08-03-2026 |

Shree Samsthan Nagve Gomantak

# Shree Lakshminarayan Mahamaya Temple

Hanumatta, Post: Vandige, Ankola - 581 357 (UK).

## SEVA LIST

| Sl. | Particulars | Rates |
|---|---|---|
| 1. | Karpoorarati | 5 |
| 2. | Kumkumarchane | 5 |
| 3. | Tulasi archane | 5 |
| 4. | Panchamrata abhisek | 15 |
| 5. | Panchista devata abhiseka & naivedya | 30 |
| 6. | Shri laxmi sahasranama kumkumarcane | 25 |
| 7. | Shri Vishnu sahasranama tulasi archane | 20 |
| 8. | Rudrabhisek | 20 |
| 9. | Pushpa pooja | 300 |
| 10. | Taat pooja | 1000 |
| 11. | Shri Satyanarayana pooja Kanike | 100 |
| 12. | Honti | 100 |
| 13. | Nandadeep one month one side | 450 |
| | Nandadeep one month both side | 900 |
| 14. | Upanayan kanike | 105 |
| 15. | Lagna kanike | 250 |
| 16. | Jayval kanike | 105 |
| 17. | Kichadi naivedya to Ravalnath & Bhootnath | 300 |
| 18. | Mahapooja to Ravalnath & Bhootnath | 501 |
| 19. | Amrutpadi Nandadeepa Saswat Seva | 1000 |

Book Post

Shree Samsthan Nagve Gomantak

**SHREE LAKSHMINARAYAN MAHAMAYA TEMPLE**

**( Private Temple of the Kulavis )**

Hanumatta, P.O. Vandige, ANKOLA - 581357 (Uttar Kannada)

Phone : 08388-230222 • 295644 • Cell.: 8105895644

e-mail : slmtmt@yahoo.com

Website : www.nagvesamsthanankola.com

To,

..........................................................................

..........................................................................

..........................................................................

..........................................................................

